ಉತ್ತರ

127

14

16/01

**ಮಾನ್ಯ ವಿಧಾನ ಪರಿಷತ್ ಸದಸ್ಯರುಗಳಾದ ಶ್ರೀ ಎಸ್.ವಿ. ಸಂಕನೂರು. ಶ್ರೀ ಪುಟ್ಟಣ್ಣ, ಶ್ರೀ ಎಸ್.ಎಲ್.ಭೋಜೇಗೌಡ ಹಾಗೂ ಶ್ರೀ ಡಿ.ಟಿ ಶ್ರೀನಿವಾಸ (ಡಿ.ಟಿ.ಎಸ್) ಇವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ**

**ವಿಷಯ:**

**ರಾಜ್ಯದ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ 2006 ಪೂರ್ವದಲ್ಲಿ ನೇಮಕಗೊಂಡು ನಂತರ ಅನುದಾನಕ್ಕೆ ಒಳಪಟ್ಟಿರುವ ಹಾಗೂ 2006ರ ನಂತರ ನೇಮಕಗೊಂಡ ಸಿಬ್ಬಂದಿಗೆ ಪಿಂಚಣಿ ಸೌಲಭ್ಯ ಸಿಗದೆ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿರುವ ಬಗ್ಗೆ.**

**ಉತ್ತರ:**

ಸರ್ಕಾರದ ಆದೇಶ ಸಂಖ್ಯೆ : ಎಫ್‌ಡಿ [ಎಸ್‌ಪಿಎಲ್] 04 ಪಿಇಟಿ 2002, ದಿನಾಂಕ : 31-03-2006 ರನ್ವಯ ದಿನಾಂಕ :01-04-2006 ರ ನಂತರ ನೇಮಕಗೊಂಡ ನೌಕರರಿಗೆ ದಿನಾಂಕ: 01-04-2006 ರಿಂದ ಅನ್ವಯಿಸುವಂತೆ ನೂತನ ಪಿಂಚಣಿ ಯೋಜನೆಯನ್ನು ಜಾರಿಗೆ ತರಲಾಗಿದೆ. ಸದರಿ ಆದೇಶದ ಕ್ರಮ ಸಂಖ್ಯೆ : 01 ರಲ್ಲಿ ಸರ್ಕಾರಿ ನೌಕರರ ಮೂಲ ವೇತನದಲ್ಲಿ 10% ರಷ್ಟನ್ನು ನೌಕರರ ವೇತನದಿಂದ ವಂತಿಕೆಯನ್ನು ಕಟಾಯಿಸಿ ಹಾಗೂ ನೌಕರನ ವಂತಿಕೆಯ ಅಷ್ಟೇ ಮೊತ್ತವನ್ನು [ಮೂಲವೇತನದ 10% ರಷ್ಟು] ಸರ್ಕಾರದಿಂದ ವಂತಿಕೆ ರೂಪದಲ್ಲಿ ನೀಡಲಾಗುತ್ತಿದೆ.

ಸದರಿ ಆದೇಶದ ಕ್ರಮ ಸಂಖ್ಯೆ : 08 ರಲ್ಲಿ ಖಾಸಗಿ ಅನುದಾನಿತ ಸಿಬ್ಬಂದಿಗೂ ನೂತನ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಿದ್ದು, ನೌಕರರ ವಂತಿಕೆಯನ್ನು ಅವರ ಮೂಲ ವೇತನದಲ್ಲಿ 10% ರಷ್ಟನ್ನು ನೌಕರರ ವೇತನದಿಂದ ವಂತಿಕೆಯನ್ನು ಕಟಾಯಿಸಿ ಹಾಗೂ ನೌಕರರ ವಂತಿಕೆಯ ಅಷ್ಟೇ ಮೊತ್ತವನ್ನು [ಮೂಲವೇತನದ 10% ರಷ್ಟು ಶಾಲಾ ಆಡಳಿತ ಮಂಡಳಿಯಿಂದ ವಂತಿಕೆ ರೂಪದಲ್ಲಿ ಭರಿಸತಕ್ಕದ್ದೆಂದು ಆದೇಶಿಸಲಾಗಿದೆ.

ಸರ್ಕಾರಿ ನೌಕರರ ಪ್ರಕರಣದಲ್ಲಿ ಸರ್ಕಾರದ ವಂತಿಕೆಯನ್ನು ಸರ್ಕಾರದಿಂದ ನೀಡಲಾಗುತ್ತಿದೆ. ಖಾಸಗಿ ಅನುದಾನಿತ ಶಾಲೆಯ ಸಿಬ್ಬಂದಿ ಪ್ರಕರಣದಲ್ಲಿ ಪ್ರಸ್ತುತದವರೆವಿಗೂ ನೂತನ ಪಿಂಚಣಿ ಯೋಜನೆಗಾಗಿ ನೌಕರನ ಮೂಲ ವೇತನದಲ್ಲಿ 10% ರಷ್ಟನ್ನು ಕಟಾಯಿಸುತ್ತಿರುವುದಿಲ್ಲ. ಹಾಗೂ ನೌಕರನ ವಂತಿಕೆಯ ಅಷ್ಟೇ ಮೊತ್ತವನ್ನು (ಮೂಲವೇತನದ 10% ರಷ್ಟು) ಶಾಲಾ ಆಡಳಿತ ಮಂಡಳಿಗಳು ಸಹಾ ಭರಿಸುತ್ತಿರುವುದಿಲ್ಲ. ಆದುದರಿಂದ ಅನುದಾನಿತ ಶಾಲಾ ಸಿಬ್ಬಂದಿಗಳಿಗೆ ನಿವೃತ್ತಿ ನಂತರ ಪಿಂಚಣಿ ಪಡೆಯಲು ಸಾಧ್ಯವಾಗುತ್ತಿಲ್ಲ.

ಸರ್ಕಾರದ ಆದೇಶ ಸಂಖ್ಯೆ : ಆಇ 37 ಪಿಇಎನ್ 2018, ದಿನಾಂಕ : 31-08-2019 ರನ್ವಯ ನೂತನ ಪಿಂಚಣಿ ಯೋಜನೆಯಲ್ಲಿ ಸರ್ಕಾರದ ವಂತಿಕೆಯನ್ನು ದಿನಾಂಕ : 01-04-2019 ರಿಂದ ಅನ್ವಯವಾಗುವಂತೆ 10% ರಿಂದ 14% ಕ್ಕೆ ಹೆಚ್ಚಿಸಲಾಗಿದೆ.

--2

ಪ್ರಸ್ತುತ ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳಿಗೆ ಆಯಾ ಆಡಳಿತ ಮಂಡಳಿಯು ನೇಮಕಾತಿ ಪ್ರಾಧಿಕಾರವಾಗಿದ್ದು, ಸರ್ಕಾರ ಮತ್ತು ಸಿಬ್ಬಂದಿಗಳ ನಡುವೆ ಯಾವುದೇ ಉದ್ಯೋಗದಾತ ಮತ್ತು ಉದ್ಯೋಗಿ ಸಂಬಂಧವಿರುವುದಿಲ್ಲ. ದಿನಾಂಕ:01-04-2006ಕ್ಕೂ ಪೂರ್ವದಲ್ಲಿ ನೇಮಕಾತಿ ಹೊಂದಿದ ಅನುದಾನಿತ ಸಿಬ್ಬಂದಿಗಳ ಸಂಬಂಧದಲ್ಲಿ TBS ನಿಯಮಾವಳಿಗಳು ಅನ್ವಯವಾಗುತ್ತಿತ್ತು, ದಿನಾಂಕ:01-04-2006ರ ನಂತರ ನೇಮಕಾತಿ ಹೊಂದಿದ ಅನುದಾನಿತ ಸಿಬ್ಬಂದಿಗಳ ಸಂಬಂಧದಲ್ಲಿ ಈ ನಿಯಮಗಳು ಅನ್ವಯವಾಗುವುದಿಲ್ಲ. ಆದುದರಿಂದ, ದಿನಾಂಕ:01-04-2006ರ ನಂತರ ನೇಮಕಾತಿ ಹೊಂದಿದ ಅನುದಾನಿತ ಸಿಬ್ಬಂದಿಗಳಿಗೆ ಪಿಂಚಣಿಯನ್ನು ಪಾವತಿಸುವುದು ಸರ್ಕಾರದ ಹೊಣೆಯಾಗಿರುವುದಿಲ್ಲ. ಈ ಹಿನ್ನಲೆಯಲ್ಲಿ ರಾಜ್ಯದ ಖಾಸಗಿ ಅನುದಾನಿತ ಪ್ರಾಥಮಿಕ, ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರು/ ಸಿಬ್ಬಂದಿಗಳು, ನಿವೃತ್ತಿ ಮತ್ತು ಮರಣ ಹೊಂದಿರುವ ಶಿಕ್ಷಕರು/ ಸಿಬ್ಬಂದಿಗಳಿಗೆ ನೂತನ ಪಿಂಚಣಿ ಯೋಜನೆಯ ಆಡಳಿತ ಮಂಡಳಿಯ ವಂತಿಕೆಯನ್ನು ಆಯಾಯ ಆಡಳಿತ ಮಂಡಳಿಗಳೇ ಭರಿಸಬೇಕೆಂದು ಆರ್ಥಿಕ ಇಲಾಖೆ ನಿರ್ದೇಶನ ನೀಡಲಾಗಿದೆ.

ಮುಂದುವರೆದು, ಬೆಳಗಾವಿಯ ಸುವರ್ಣ ಸೌಧದಲ್ಲಿ ನಡೆದ ಚಳಿಗಾಲ ಅಧಿವೇಶನದ ಸಂದರ್ಭದಲ್ಲಿ ದಿನಾಂಕ:10-12-2025 ರಂದು ನಡೆದ ಸಭೆಯಲ್ಲಿ ಮಾನ್ಯ ವಿಧಾನ ಪರಿಷತ್ ಸದಸ್ಯರುಗಳ ಜೊತೆ ಚರ್ಚಿಸಿದಂತೆ ಅನುದಾನಿತ ಶಾಲಾ ಶಿಕ್ಷಕರ ಎನ್.ಪಿ.ಎಸ್ ವಂತಿಕೆಯನ್ನು ಸರ್ಕಾರವೇ ಭರಿಸುವ ಕುರಿತು ಪರಿಶೀಲಿಸಿ ಮತ್ತೊಮ್ಮೆ ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಲಾಗುವುದು.

**ಸಂಖ್ಯೆ: ಇಪಿ 110 ಎಸ್‌ಇಎಸ್ 2026**

**(ಎಸ್ ಮಧುಬಂಗಾರಪ್ಪ)**
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ**
**ಇಲಾಖಾ ಸಚಿವರು**